ಕರ್ನಾಟಕ Government ಸರ್ಕಾರ of karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in
Phone - 080 26980100
Fax - 080 26422377
ಡಿಎಸ್ಇಆರ್‌ಟಿ DSERT

ಸಂಖ್ಯೆ:ಎಸ್.ಎಸ್.ಕೆ ಪ್ರೌಢ/ನಿಷ್ಠಾ–2.0 ತರಬೇತಿ/03/2021–22 ದಿನಾಂಕ: 06.12.2021

# ಜ್ಞಾಪನ

"ಅಂತಿಮ ಅವಕಾಶ"

ವಿಷಯ : ನಿಷ್ಠಾ–2.0 ತರಬೇತಿಯ ವೇಳಾಪಟ್ಟಿಯಲ್ಲಿ ಮಾರ್ಪಾಡು ಮಾಡಿ ಕೋರ್ಸ್‌ಗಳ ಅನುಭವ ಪಡೆಯಲು ಅವಕಾಶ ಕಲ್ಪಿಸಿರುವ ಬಗ್ಗೆ.

ಉಲ್ಲೇಖ : 1) Prof. Amarendra P. Behera, Joint Director, CIET, NCERT, New Delhi Letter No F.3-108/2021-22/CIET/DICT & TD Nov 237, 2021.

2) ಕಛೇರಿ ಸಮಸಂಖ್ಯೆ ಪತ್ರ ದಿನಾಂಕ 12.10.2021

******

ವಿಷಯದನ್ವಯ 2020-21ನೇ ಸಾಲಿನಲ್ಲಿ NCERTಯಿಂದ ರಾಷ್ಟ್ರದ ಎಲ್ಲಾ ಪ್ರೌಢಶಾಲಾ ಶಿಕ್ಷಕರಿಗೆ ನಿಷ್ಠಾ–2.0 ತರಬೇತಿಯನ್ನು ನೀಡಲಾಗುತ್ತಿದೆ. ಈ ಆನ್‌ಲೈನ್ ಕೋರ್ಸ್‌ಗಳನ್ನು ಕನ್ನಡಕ್ಕೆ ಅನುವಾದಿಸಿ PAB ಪ್ರಕಾರ ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲಾ ಶಿಕ್ಷಕರಿಗೆ ದೀಕ್ಷಾ ಪೋರ್ಟಲ್ ಮೂಲಕ ದಿನಾಂಕ: 01.08.2021 ರಿಂದ ತರಬೇತಿ ಪಡೆಯಲು ಅವಕಾಶ ಕಲ್ಪಿಸಿದೆ.

ನಿಷ್ಠಾ–2.0 ತರಬೇತಿಯ ಕೋರ್ಸ್‌ಗಳ ವೇಳಾಪಟ್ಟಿಯಂತೆ ಡಿಸೆಂಬರ್–2021ರ ಮಾಹೆಯಲ್ಲಿ ವಿಷಯ ನಿರ್ದಿಷ್ಟಿತ ಶಿಕ್ಷಣಶಾಸ್ತ್ರದ ಕೋರ್ಸ್‌ಗಳು (SUBJECT SPECIFIC PEDAGOGY COURCES) ಪ್ರಾರಂಬಿಸಬೇಕಾಗಿದ್ದು, ಈ ಸಂಬಂಧ ಪ್ರೌಢಶಾಲಾ ಹಂತದಲ್ಲಿ ಕೆಲವು ಶಿಕ್ಷಕರು ತಾಂತ್ರಿಕ ಅಥವಾ ಇತರೆ ಸಮಸ್ಯೆಗಳಿಂದ ನಿಷ್ಠಾ–2.0 ತರಬೇತಿಯ ಕೋರ್ಸ್‌ಗಳನ್ನು(ಕೋರ್ಸ್–01 ರಿಂದ ಕೋರ್ಸ್–12ರವರೆಗೆ) ಪೂರ್ಣಗೊಳಿಸಲು ಸಾಧ್ಯವಾಗದ ಕಾರಣ ಪ್ರಗತಿಯಲ್ಲಿ ಕುಂಟಿತಗೊಂಡಿರುತ್ತದೆ ಎಂದು ಉಲ್ಲೇಖ 01 ರ ಪತ್ರದಲ್ಲಿ ತಿಳಿಸಿರುತ್ತಾರೆ. **ಈ ಸಂಬಂಧ ಕೋರ್ಸ್‌ನ ಅನುಭವ ಪಡೆಯಲು ವಂಚಿತರಾದವರಿಗೆ ಮತ್ತೊಮ್ಮೆ ಅವಕಾಶ ಕಲ್ಪಿಸುವ ಸಲುವಾಗಿ** ತರಬೇತಿಯ ಎಲ್ಲಾ ಕೋಸ್‌ಗಳನ್ನು ತಿಂಗಳಿಗೆ 06 ಕೋರ್ಸ್‌ಗಳಂತೆ ಅಂದರೆ ಡಿಸೆಂಬರ್–2021 ರ ಮಾಹೆಯಲ್ಲಿ ಕೋರ್ಸ್–01 ರಿಂದ 06 ಮತ್ತು ಜನವರಿ–2022 ರ ಮಾಹೆಯಲ್ಲಿ ಕೋರ್ಸ್–07 ರಿಂದ 12 ರವರೆಗೆ ಪೂರ್ಣಗೊಳಿಸಲು ಉಲ್ಲೇಖಿತ ಪತ್ರದಲ್ಲಿ ಅವಕಾಶ ಕಲ್ಪಿಸಿರುತ್ತಾರೆ.

ಉಲ್ಲೇಖ–02ರಲ್ಲಿ ಉಸ್ತುವಾರಿ ಅಧಿಕಾರಿಗಳು ನಿಷ್ಠಾ–2.0 ಕೋರ್ಸ್‌ಗಳ ಅನುಭವ ಪಡೆಯಲು ತಿಳಿಸಲಾಗಿತ್ತು. ಈ ಸಂಬಂಧ ನಿಷ್ಠಾ–2.0 ತರಬೇತಿಯನ್ನು ಪೂರ್ಣಗೊಳಿಸದ ಎಲ್ಲಾ ಶಿಕ್ಷಕರು, ಗ್ರೂಪ್–ಬಿ ವೃದಂದ ಅಧಿಕಾರಿಗಳು, ಶಿಕ್ಷಣಾಧಿಕಾರಿಗಳ ವೃಂದ, ಉಪನಿರ್ದೇಶಕರ ವೃಂದ, ಸಹನಿರ್ದೇಶಕರ ವೃಂದ ಹಾಗೂ ನಿರ್ದೇಶಕರ ವೃಂದದ ಎಲ್ಲಾ ಉಸ್ತುವಾರಿ ಅಧಿಕಾರಿಗಳು S.S.O ಮೂಲಕ ಲಾಗಿನ್ ಆಗಿ ನಿಗದಿತ ವೇಳೆಯಲ್ಲಿ ಆನ್‌ಲೈನ್ ಕೋರ್ಸ್‌ಗಳ ಅನುಭವವನ್ನು ಪಡೆದುಕೊಳ್ಳುವುದು. ಕೋರ್ಸ್‌ನ ವೇಳಾಪಟ್ಟಿ ಕೆಳಕಂಡಂತಿದೆ.

| ಕ್ರ.ಸಂ | ಮಾಹೆ | ವಿವರ |
|---|---|---|
| 1 | ಡಿಸೆಂಬರ್ – 2021 | ಕೋರ್ಸ್–01 ರಿಂದ ಕೋರ್ಸ್ 06 ರವರೆಗೆ (Batch2) |
| 2 | ಜನವರಿ – 2022 | ಕೋರ್ಸ್–07 ರಿಂದ ಕೋರ್ಸ್ 12 ರವರೆಗೆ (Batch2) |
| 3 | ಫೆಬ್ರವರಿ – 2022 | ಶಿಕ್ಷಣಶಾಸ್ತ್ರದ ಕೋರ್ಸ್‌ಗಳು (SUBJECT SPECIFIC PEDAGOGY COURCES) |
| 4 | ಮಾರ್ಚ್–2022 | ಶಿಕ್ಷಣಶಾಸ್ತ್ರದ ಕೋರ್ಸ್‌ಗಳು (SUBJECT SPECIFIC PEDAGOGY COURCES) (Batch2) |

**ಈ ಮೇಲಿನ ವೇಳಾಪಟ್ಟಿಯಂತೆ ನಿಗದಿತ ವೇಳೆಯಲ್ಲೇ ನಿಷ್ಠಾ-2.0ರ ಎಲ್ಲಾ 12 ಕೋರ್ಸ್‌ಗಳ ಅನುಭವವನ್ನು ಸಂಬಂಧಿಸಿದ ಎಲ್ಲಾ ಪ್ರೌಢಶಾಲಾ ಶಿಕ್ಷಕರು ಮತ್ತು ಅಧಿಕಾರಿಗಳು ತಪ್ಪದೆ ಕಡ್ಡಾಯವಾಗಿ ಪಡೆದುಕೊಳ್ಳುವುದು.**

(ಎಂ.ಆರ್. ಮಾರುತಿ)
ನಿರ್ದೇಶಕರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಬೆಂಗಳೂರು

6/12/21 6/12

**ಗೆ,**

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಮತ್ತು ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ & ತತ್ಸಮಾನ ವೃಂದದ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು & ತತ್ಸಮಾನ ವೃಂದದ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.
3. ಎಲ್ಲಾ ಬ್ಲಾಕ್‌ಗಳ BRC ಗಳಿಗೆ ಅಗತ್ಯ ಕ್ರಮಕ್ಕಾಗಿ.

**ಪ್ರತಿಯನ್ನು**

1. ಮಾನ್ಯ ಆಯುಕ್ತರು, ಸಾ.ಶಿ.ಇ, ನೃಪತುಂಗರಸ್ತೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.
2. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ನೃಪತುಂಗರಸ್ತೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.
3. ರಾಜ್ಯದ ಎಲ್ಲಾ ನಿರ್ದೇಶಕರುಗಳಿಗೆ ಮಾಹಿತಿಗಾಗಿ ಸಲ್ಲಿಸಿದೆ.
4. ರಾಜ್ಯದ ಎಲ್ಲಾ ಸಹನಿರ್ದೇಶಕರುಗಳಿಗೆ ಮಾಹಿತಿಗಾಗಿ ಸಲ್ಲಿಸಿದೆ.